ಇನ್ನು ಮುಸ್ಸಂಜೆಯಾಗುತ್ತಲೇ, ಕಳ್ಳಭಟ್ಟಿಯನ್ನು ತಯಾರು ಮಾಡುವವರು ತಂದು ಕೊಡುತ್ತಿದ್ದ ಹೆಂಡವನ್ನು ಬಿಡಿಬಿಡಿಯಾಗಿ ಮಾರಾಟ ಮಾಡಲು ಶುರುಮಾಡಿದರೆ, ಅವಳು ಮಲಗುತ್ತಿದ್ದುದು, ಇಡೀ ಊರು ಮೇಲಕ್ಕೆ ಏಳಲಾರದಷ್ಟು ನೆಲಕಚ್ಚಿ ಮಲಗಿದ ಮೇಲೆಯೇ.

ಆಲಹಳ್ಳಿಯ ಸುತ್ತಮುತ್ತಲಿನ ಊರಿನ ಕೆಲವರ ಬಾಯಿಯಲ್ಲಿ ಇವಳ ನಡತೆಯ ಬಗ್ಗೆ ಗಾಳಿ ಮಾತೊಂದು ಹರಿದಾಡುವುದುಂಟು. ಸರೋಜಮ್ಮನ ಬಗ್ಗೆಯೂ ಜನರು ಮೊದಮೊದಲು ಹೀಗೇ ಮಾತನಾಡಿಕೊಳ್ಳುತ್ತಿದ್ದರು. ಅದನ್ನು ನಂಬಿ, ಅವಳ ಮನೆಯ ಕಡೆ ರಾತ್ರಿ ಠಳಾಯಿಸಿ ಅವಳಿಂದಲೇ ಹೊಡೆತ ತಿಂದವರು ಅದೇ ಮಾತನ್ನು ಸೊಸೆಯ ಬಗ್ಗೆಯೂ ಹೇಳಿರಬಹುದು. ಆದರೆ ಅವಳನ್ನು ಹತ್ತಿರದಿಂದ ಬಲ್ಲವರು ಯಾರೂ ಅವಳು 'ದಂಧೆ' ಮಾಡುತ್ತಾಳೆಂಬ ಮಾತನ್ನು ಸುತಾರಾಂ ಒಪ್ಪುವುದಿಲ್ಲ.

ಸರೋಜಮ್ಮನ ಹಾಗೇ ಅವಳ ಸೊಸೆಯೂ ಯಾವುದನ್ನೂ ಕದ್ದುಮುಚ್ಚಿ ಮಾಡುವುದಿಲ್ಲ ಮತ್ತು ತಾನು ಮಾಡಿದ್ದನ್ನು ರಾಜಾರೋಷವಾಗಿ ಆಡುವುದಕ್ಕೂ ಹಿಂದೆಮುಂದೆ ನೋಡುವುದಿಲ್ಲ. ಅನೇಕ ಹೆಂಗಸರಿಗೂ ಅವಳ ಈ ಸ್ವಭಾವದಿಂದ ಮಾನ ಹರಾಜಾದ ಎಷ್ಟೋ ನಿದರ್ಶನಗಳಿವೆ. ಜಗಳದಲ್ಲಿ ಅವಳನ್ನು ಸೋಲಿಸುವವರು ಯಾರೂ ಇರಲಿಲ್ಲವಾದರೂ, ಕೆಲವೊಮ್ಮೆ ಗಯ್ಯಾಳಿ ಹೆಂಗಸರು ಇವಳನ್ನು ಕುಟುಕಿ, ಸೋಲಿಸುತ್ತಿದ್ದ ಪ್ರಸಂಗಗಳೂ ನಡೆಯುತ್ತಿದ್ದವು. ಇನ್ನೇನು ತಾನು ಸೋತು, ಎಲ್ಲರೆದುರು ನಗೆಪಾಟಲಾಗುತ್ತೇನೆ ಎನ್ನುವ ಅಸಹಾಯಕತೆಯಲ್ಲಿ ಅವಳು ಎಸೆಯುತ್ತಿದ್ದ ಕಟ್ಟಕಡೆಯ ಅಸ್ತ್ರವೆಂದರೆ,

'ಹೋಗಲೇ ಹೋಗೆ! ನಂಗೆ ನಿನ್ನ ಪೌರೂ ಗೊತ್ತು, ನಿನ್ನ ಗಂಡನ ಪೌರೂ ಗೊತ್ತು; ಬರೀ ಮಾತಾಡಬ್ಯಾಡ–ಮುಚ್ಕೊಂಡು ಹೋಗಿ ಮಲಿಕ್ಯ' ಎಂಬ ಮಾತು. ಅವಳಿಂದ ಈ ರೀತಿಯಾಗಿ ಬೈಸಿಕೊಂಡ ಹೆಂಗಸರೂ ಸಹ ಸರೋಜಮ್ಮನ ಸೊಸೆಯನ್ನಾಗಲಿ, ಅಥವಾ ತಮ್ಮ ಗಂಡಂದಿರನ್ನಾಗಲೀ ಸಂಶಯದಿಂದ ನೋಡಿದವರಲ್ಲ.

ಸರೋಜಮ್ಮನ ಮನೆಯು ಸಮೀಪಿಸುತ್ತಲೇ, ಅವಳ ಸೊಸೆಯ ಹತ್ತಿರ ಹೇಗೆ ಮಾತು ಶುರುಮಾಡುವುದು ಎಂದು ಯೋಚಿಸುತ್ತಿದ್ದ ರಾಜೇಶ, ಅವಳ ಮನೆಯ ಮುಂದೆ ಅಬಕಾರಿಯವರ ಜೀಪನ್ನೂ, ಅದರ ಸುತ್ತ ಜನರ ಗುಂಪನ್ನೂ ನೋಡಿ ಬೈಕನ್ನು ಗಕ್ಕನೆ ನಿಲ್ಲಿಸಿದ.

ತನ್ನ ಮನೆಯ ಮುಂದೆ ನಿಲ್ಲಿಸಿದ ಜೀಪನ್ನು ತೆಗೆಯುವಂತೆ ಸರೋಜಮ್ಮನ ಸೊಸೆ ಅಬಕಾರಿ ಇನ್‌ಸ್ಪೆಕ್ಟರ್‌ಗೆ ತಾಕೀತು ಮಾಡುತ್ತಾ, ಅವನನ್ನೂ ಅವನ ಇಲಾಖೆಯನ್ನೂ ಬಾಯಿಗೆ ಬಂದಂತೆ ಬೈಯ್ಯಾಡತೊಡಗಿದ್ದಳು. ಅವನೋ ಇವಳಿಗಿಂತ ಜಗಭಂಡ! ಕೊನೆಯಲ್ಲಿ, ತಾಳ್ಮೆಗೆಟ್ಟು ಹೇಳಿದ:

"ಹೋಗಲೇ, ಹೋಗೆ, ನಿಂದೆಲ್ಲಾ ಕಂಡಿದೀನಿ."

ಬೇರೆಯವರಿಂದ ಇಂಥ ಮಾತನ್ನು ಎಂದೂ ಆಡಿಸಿಕೊಳ್ಳದ ಸರೋಜಮ್ಮನ ಸೊಸೆ ತನ್ನ ಹರಿತವಾದ ನಾಲಿಗೆಯನ್ನು ಬಾಯಿಯ ಒಳಗೆ ಬಚ್ಚಿಟ್ಟುಕೊಳ್ಳುವಳೆ?

"ಏನೋ ಕಂಡಿದೀಯ ನಂದು? ಭಂಡ ನನ್ನ ಮಗನೆ, ನಿನ್ನ ಗೆಂಡೆ ಪೌರನ್ನ ಮನೀಗೆ ಹೋಗಿ ಹೆಂಡ್ರ ಮುಂದೆ ತೋರ್ಸು; ಇಲ್ಲೇನ್ ತೋರಸ್ತಿಯ ನನ್ನ ಹತ್ರ?"

ಇಡೀ ಊರಿನ ಜನರೆದುರು ಇಂಥ ಅಪಮಾನವನ್ನು ಸಹಿಸದ ಆ ಸರ್ಕಾರಿ ನೌಕರನ ಸಿಟ್ಟು ನೆತ್ತಿಗೇರಿತು. ಅನೇಕ ವರ್ಷಗಳಿಂದ ಬಡಬಗ್ಗರ ಅಮೇಧ್ಯದಲ್ಲಿಯೇ ಅದ್ದಿಕೊಂಡ ತನ್ನ ನಾಲಗೆಯನ್ನು ಅವನೂ ಹರಿಬಿಟ್ಟ:

"ಏ! ಭಜಾರಿ ಮುಂಡೆ! ನೀನು ಹೆಂಡಾ ಮಾರೋದೂ ಗೊತ್ತು, ಕುಂಡೇ ಮಾರೋದೂ